# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 1004/2016 ಸಿಡಬ್ಲೂ: 3 ಪಿಡಬ್ಲೂ: 2

ಪ್ರಮಾಣವಚನ ಬೋಧಿಸಲಾಯಿತು ದಿಃ 28-11-2025

ಹೆಸರು : ಅಂಬರೀಶ್

ತಂದೆ ಹೆಸರು : ಜಗನ್ನಾಥ್ ಚೌಡಾಪುರ

ವಯಸ್ಸು : 30 ವರ್ಷ

ಉದ್ಯೋಗ : ಬೇಕಾರ

ವಾಸಸ್ಥಳ : ಬಟಗೇರಾ ಗೇಟ್

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 1 ಮತ್ತು 2 ರವರು ನನಗೆ ಗೊತ್ತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಗುನ್ನೆ ಸ್ಥಳದ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿ ಪಿ 2 ಕ್ಕೆ ಸಹಿಯನ್ನು ಸನ್ 2016 ರಲ್ಲಿ ಚಾ ಸಾ 1 ರವರ ಮನೆಯಲ್ಲಿ ಮಾಡಿರುತ್ತೇನೆ. ಆಗ ಬೆಳಿಗ್ಗೆ 09-00 ರಿಂದ 10-00 ಗಂಟೆಯ ವೆರೆಗೆ ಪಂಚನಾಮೆಯನ್ನು ಮಾಡಿ ಒಂದು ಕಟಿಗೆ ಮತ್ತು ಕಡಚಿಯನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಸದರಿ ಕಟಿಗೆ ಮತ್ತು ಕಡಚಿಯನ್ನು ನೋಡಿ ಗುರುತಿಸಿರುತ್ತಾರೆ . ಅದನ್ನು ಈಗಾಗಲೆ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎಸ್ ಬಿ ಎಂ ವಕೀಲರಿಂದ:

ಪೋಲೀಸರು ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿರುವುದಿಲ್ಲ ಖಾಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಿ ಪಿ 2 ಕ್ಕೆ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂರದೆ ಸರಿಯಿಲ್ಲ. ಸಾಕ್ಷಿಯು ಮುಂದುವರೆದು ಮನೆಯಲ್ಲಿ ಮಾಡಿರುತ್ತೇನೆ ಎಂದು ನುಡಿಯತ್ತಾರೆ. ಚಾ ಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 1004/2016 ಸಿಡಬ್ಲೂ: 4 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 28-11-2025

ಹೆಸರು : ಸುರೇಶ

ತಂದೆ ಹೆಸರು : ಪಾಂಡುರಂಗ

ವಯಸ್ಸು : 55 ವರ್ಷ

ಉದ್ಯೋಗ : ಬೇಕಾರ

ವಾಸಸ್ಥಳ : ಬಟಗೇರಾ ಗೇಟ್

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 1 ನನ್ನ ತಮ್ಮ. ಚಾ ಸಾ 7 ಗೊತ್ತು. ಚಾ ಸಾ 5 ಮತ್ತು 6 ನಮ್ಮ ಊರಿನವರು. ಆರೋಪಿತರು ನನಗೆ ಪರಿಚಯ. (ಈ ದಿನ ಆರೋಪಿತರು ನ್ಯಾಯಾಲಯದಲ್ಲಿ ಗೈರು ಹಾಜರು ಇರುತ್ತಾರೆ. ಆರೋಪಿ ಪರ ವಕೀಲರು ಹಾಜರಾತಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಆರೋಪಿತರ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ವಾದ ಮಂಡಿಸಿರುತ್ತಾರೆ.)

ಜಗಳ ಎಷ್ಟು ವರ್ಷಗಳ ಹಿಂದೆ ಆಗಿತ್ತು ನನಗೆ ನೆನಪಿಲ್ಲ. ಆದರೆ ಆರೋಪಿತರೆಲ್ಲಾರು ಚಾ ಸಾ 1 ರವರ ಹೊಟ್ಟೆಗೆ ಹಾಗೂ ಇನ್ನಿತರ ಭಾಗಕ್ಕೆ ಹೊಡೆದರು. ಆಗ ನಾನು ಅವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆರೋಪಿತರು ಚಾ ಸಾ 1 ರವರಿಗೆ ಮು ಮಾ 1 ಮತ್ತು 2 ರಿಂದ ಹೊಡೆದಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.07-06-2016 ರಂದು ರಾತ್ರಿ 08-30 ಗಂಟೆಗೆ ನಾನು ಚಾ ಸಾ 5 ಮತ್ತು 6 ರವರು ಚಾ ಸಾ 1 ರವರ ಮನೆಯ ಮುಂದೆ ನಿಂತಾಗ ಆರೋಪಿತರು ಬಂದು ಹೇ ಎಲ್ಲಾ ರಂಡಿ ಮಗನೆ ಅಂತಾ ಮನೆಯ ಹೊರಗಡೆ ಬಾ ಎಷ್ಟು ದಮ್ ಅದಾ ನೋಡಿಕೊಳ್ಳುತೇನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆಗ ಚಾ ಸಾ 1 ರವರು ಯಾಕೆ ಬೈಯುತ್ತಿದ್ದೀಯಾ ಅಂತಾ ಕೇಳಿದರು ಎಂದರೆ ಸರಿ. ಆಗ 3

ನೇ ಆರೋಪಿತನು ಕಡಚಿ ತಗೆದುಕೊಂಡು ಚಾ ಸಾ 1 ರವರ  ಎಡ ಹಣೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂದರೆ ಸರಿ. ಅದೇ ರೀತಿ ಬಡಿಗೆಯನ್ನು ಹಿಡಿದುಕೊಂಡು ಚಾ ಸಾ 1 ರವರ ಹೊಟ್ಟೆಗೆ ಮತ್ತು ಬೆನ್ನಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂದರೆ ಸರಿ. 2 ನೇ ಆರೋಪಿತನು ಚಾ ಸಾ 1 ರವರಿಗೆ ಕೈಯಿಂದ ಹೋಡೆದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ. ಆಗ ನಾನು ಮತ್ತು ಚಾ ಸಾ 5 ರಿಂದ 7 ರವರು ಜಗಳ ಬಿಡಿಸಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎಸ್ ಬಿ ಎಂ ವಕೀಲರಿಂದ:

ಪೋಲೀಸರು ನಮ್ಮ ಹೇಳಿಕೆಯಲ್ಲಿ ಬರೆದಿರುವ ಎಲ್ಲಾ ವಿಷಯಗಳನ್ನು ಓದಿ ಹೇಳಿದ್ದಾರೆ. ಘಟನೆ ನಡೆಯುವ ಸಮಯದಲ್ಲಿ ಬೆಳಕು ಇತ್ತು. ಕತ್ತಲಿರುವುದರಿಂದ ಚಾ ಸಾ 1 ರವರಿಗೆ ಯಾರು ಹೊಡೆದಿರುತ್ತಾರೆ ಎಂದರೆ ಹೇಳಲು ಬರುವುದಿಲ್ಲ ಎಂದರೆ ಸರಿಯಿಲ್ಲ. ನಾನು ಮೊದಲು ಬೆಂಗಳೂರಿನಲ್ಲಿ ಗೌಂಡಿ ಕೆಲಸ ಮಾಡುತ್ತಿದ್ದೆ ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಶಾಂತಾಬಾಯಿ ಎಂಬುವವರಿಗೆ ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದೆನು ಎಂದರೆ ನನಗೆ ಗೊತ್ತಿಲ್ಲ. 4 ನೇ ಆರೋಪಿತನ ಅಣ್ಣ ರಜಿನಿಕಾಂತ ಎಂಬುವವರು  ನನೊಂದಿಗೆ ಬೆಂಗಳೂರಿನಲ್ಲಿ ಗೌಂಡಿ ಕೆಲಸ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆಗ ಸದರಿ ರಜಿನಿಕಾಂತ ಈತನು ಶಾಂತಾಬಾಯಿರವರಿಗೆ ಬೆಂಗಳೂರಿನಿಂದ ಕರೆದುಕೊಂಡು ಹೋಗಿರುವುದರಿಂದ ಮನಸ್ಸಿ ನಲ್ಲಿ ಇಟ್ಟುಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಿಲ್ಲ. 2 ನೇ ಆರೋಪಿತನು ನನಗೆ ಮಗನಾಗಬೇಕು ಎಂದರೆ ಸರಿ. ಆರೋಪಿತರು ಚಾ ಸಾ 1 ರವರಿಗೆ ಹೊಡೆದಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. 3 ಮತ್ತು 4 ನೇ ಆರೋಪಿತರು ಚಿತ್ತಾಪುರದಲ್ಲಿ ವಾಸಿಸುತಾನೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂ: 1004/2016 ಸಿಡಬ್ಲೂ: 7 ಪಿಡಬ್ಲೂ: 4

ಪ್ರಮಾಣವಚನ ಬೋಧಿಸಲಾಯಿತು ದಿ: 28-11-2025

ಹೆಸರು : ಭಾಗಮ್ಮ

ಗಂಡ ಹೆಸರು : ಯಲ್ಲಾರೆಡ್ಡಿ

ವಯಸ್ಸು : 25 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಬಟಗೇರಾ ಗೇಟ್

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 1 ನನ್ನ ಗಂಡ. ಚಾ ಸಾ 4 ರಿಂದ 6 ರವರ ನಮ್ಮ ಊರಿನವರು. ಆರೋಪಿತರು ನನಗೆ ಗೊತ್ತಿಲ್ಲ. ಆದರೆ ಜಗಳ ಸಮಯದಲ್ಲಿ ನೋಡಿದ್ದೇನೆ. ಸುಮಾರು 9 ವರ್ಷಗಳ ಹಿಂದೆ ರಾತ್ರಿ 08-00 ಗಂಟೆಗೆ ಚಾ ಸಾ 1 ಮತ್ತು ಆರೋಪಿತರ ನಡುವೆ ಜಗಳ ಆಗಿತ್ತು. ಆಗ ಆರೋಪಿತರು ಬಂದು ಚಾ ಸಾ 1 ರವರಿಗೆ ಬಾರಲೇ ಎಲ್ಯಾ ಅಂತಾ ಹೇಳಿದರು. ಆಗ ಚಾ ಸಾ 1 ರವರು ಯಾಕಪ್ಪ ನಾನು ಏನು ಮಾಡಿದ್ದನಿ ಅಂತಾ ಹೇಳಿದರು . ಆಗ ಆರೋಪಿತರು ಬಂದು ನಿನ್ನದು ಬಹಳ ಆಗಿದೆ ಅಂತಾ ಹೇಳಿದನು. ನಂತರ 4 ನೇ ಆರೋಪಿತನು ಕಟ್ಟಿಗೆಯಿಂದ ಚಾ ಸಾ 1 ರವರ ತಲೆಗೆ ಹೊಡೆದಿರುತ್ತಾನೆ. 2 ನೇ ಆರೋಪಿತನು ಮತ್ತು ಇನ್ನಿಬ್ಬರು ಅವರ ಹೆಸರು ಗೊತ್ತಿಲ್ಲ ಅವರೆಲ್ಲಾರು ಚಾ ಸಾ 1 ರವರಿಗೆ ಕಡಚಿ ತೆಗೆದುಕೊಂಡು ಹೊಟ್ಟೆಗೆ ಚುಚ್ಚಿದರು. ಆಗ ನಾವು ಬಿಡಿಸಲು ಹೋದಾಗ ಚಾ ಸಾ 1 ರವರಿಗೆ ಬಹಳ ಗಾಯಗಳಾಗಿರುವುದರಿಂದ ಆಂಬ್ಯೂಲೆನ್ಸಗೆ ಕರೆ ಮಾಡಿ ಸೇಡಂ ಸರ್ಕಾರಿ ಆಸ್ಪತ್ರೆಗೆ ಕರೆದುಕುಂಡು ಹೋಗಿದ್ದೆವು. ಈ ಬಗ್ಗೆ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>**ಪಾಟೀಸವಾಲು:**</u> ಮಾನ್ಯ ಸ.ಸ.ಅ ರವರಿಂದ:

ದಿ.07-06-2016 ರಂದು ರಾತ್ರಿ 08-30 ಗಂಟೆಗೆ ನಾನು ಚಾ ಸಾ 5 ಮತ್ತು 6 ರವರು ಚಾ ಸಾ 1 ರವರ ಮನೆಯ ಮುಂದೆ ನಿಂತಾಗ ಆರೋಪಿತರು ಬಂದು ಹೇ ಎಲ್ಲಾ ರಂಡಿ ಮಗನೆ ಅಂತಾ ಮನೆಯ ಹೊರಗಡೆ ಬಾ ಎಷ್ಟು ದಮ್ ಅದಾ ನೋಡಿಕೊಳ್ಳುತೇನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆಗ ಚಾ ಸಾ 1 ರವರು ಯಾಕೆ ಬೈಯುತ್ತಿದ್ದೀಯಾ ಅಂತಾ ಕೇಳಿದರು ಎಂದರೆ ಸರಿ. ಆಗ 3 ನೇ ಆರೋಪಿತನು ಕಡಚಿ ತಗೆದುಕೊಂಡು ಚಾ ಸಾ 1 ರವರ ಎಡ ಹಣೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂದರೆ ಸರಿ. ಅದೇ ರೀತಿ ಬಡಿಗೆಯನ್ನು ಹಿಡಿದುಕೊಂಡು ಚಾ ಸಾ 1 ರವರ ಹೊಟ್ಟೆಗೆ ಮತ್ತು ಬೆನ್ನಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂದರೆ ಸರಿ. 2 ನೇ ಆರೋಪಿತನು ಚಾ ಸಾ 1 ರವರಿಗೆ ಕೈಯಿಂದ ಹೋಡೆದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ. ಆಗ ನಾನು ಮತ್ತು ಚಾ ಸಾ 4 ರಿಂದ 6 ರವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ಮು ಮಾ 1 ಮತ್ತು 2 ನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿರುತ್ತಾರೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎಸ್ ಬಿ ಎಂ ವಕೀಲರಿಂದ:

ಪೋಲೀಸರು ನನ್ನ ಹೇಳಿಕೆಯನ್ನು ನನ್ನ ಮನೆಯಲ್ಲಿ ಪಡೆದುಕೊಂಡಿರುತ್ತಾರೆ. ಹಾಗೂ ಆಸ್ಪತ್ರೆಯಲ್ಲಿಯೂ ಪಡೆದುಕೊಂಡಿರುತ್ತಾರೆ. ಹೇಳಿಕೆಯಲ್ಲಿ ಪೊಲೀಸರು ಏನು ಬರೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿಯಿಲ್ಲ. ಕಡಚಿಯಿಂದ ಸದ್ದಾಮ್ ಎಂಬುವವರು ಚಾ ಸಾ 1 ರವರಿಗೆ ಹೊಡೆದಿರುತ್ತಾರೆ. ಸದ್ದಾಮ್ ಮತ್ತು ಆರೋಪಿತರಿಗೆ ಯಾವುದೇ ಪರಿಚಯ ಇಲ್ಲ ಎಂದರೆ ಸರಿ. ಈ ಬಗ್ಗೆ ನನ್ನ ಹೇಳಿಕೆಯಲ್ಲಿ ಬೆರದಿಲ್ಲ ಎಂದರೆ ಸರಿ. ಜಗಳ ನಡೆಯುತ್ತಿರುವಾಗ ನಾನು ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಿಲ್ಲ. ಜಗಳ ನಡೆದ ಸಮಯದಲ್ಲಿ ಕತ್ತಲು ಇರುವುದರಿಂದ ಯಾರು ಯಾರಿಗೆ ಹೊಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಿಲ್ಲ. ಅದೇ ರೀತಿ ಆರೋಪಿತರು ಕಟಿಗೆಯನ್ನು ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರಿತಿ 4 ನೇ ಆರೋಪಿತರನು ಬಡಿಗೆಯಿಂ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಿಲ್ಲ. ಘಟನೆಯಾದಾಗ 2 ನೇ ಆರೋಪಿತನು ಚಾ ಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಿಲ್ಲ. ಸಾಕ್ಷಿಯು ಮುಂದುವೆರದು ನಾನು ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ, ಆಂಬ್ಯುಲೆನ್ಸಗೆ ನಾನೇ ಕರೆ ಮಾಡಿರುತ್ತೇನೆ. ಆರೋಪಿತರ ಮತ್ತು ನಮ್ಮ ನಡುವೆ ಅಳೆಂಯ ವೈಶಮ್ಯ ಇರುವುದರಿಂದ ಬೇರೆ ಸದ್ದಾಮ್ ಎಂಬುವವರು ಹೊಡೆದರು ಸಾಹ ನಾನು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತಿತದ್ದೇನೆ ಎಂದರೆ ಸರಿಯಿಲ್ಲ. ಚಾ ಸಾ 1 ಮತ್ತು 4

ರವರು ಬೆಂಗಳೂರಿನಲ್ಲಿ ಗೌಂಡಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಿಲ್ಲ. ಆರೋಪಿತರು ಚಾ ಸಾ 1 ರವರಿಗೆ ಯಾವುದೇ ರೀತಿಯ ಹೊಡೆ ಬಡೆ ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**